ತಂಡದ ಬುದುವಂತ ಜಾನು ಬಂದಾಗ ಕಾರ್ತಿಕ ಮಾಸದ ತುಳಸಿ ಮದುವೆಯ ಮಂಟಪ ಅಂಗಳದಲ್ಲಿ ಕಳಚದೆ ಹಾಗೆಯೇ ಇತ್ತು. ಕೊಯ್ಲಾದ ಒದ್ದೆ ಗದ್ದೆಯಲ್ಲಿ ಉದ್ದುದ್ದ ಕೋಲು ಕಾಲುಗಳನ್ನು ಊರುತ್ತ ಊಟ ಹುಡುಕುವ ಕೊಕ್ಕರೆಯಂಥ ಒಲಸೆ ಹಕ್ಕಿಗಳೊಂದಿಗೆ ಮಾತಾಡಿಕೊಂಡಂತೆ ಜಾನು ಹಾಜರಾಗಿದ್ದ. ಹಾಲು ಕಾಳಾಗಿ ನೀಲಾಕಾಶ ನೋಡುತ್ತ ಕಣಕ್ಕೆ ಕುಣಿಯುತ್ತ ಸುಗ್ಗಿ ಬಂದ ಸುದ್ದಿ ಅವನಿಗೆ ಯಾರೂ ತಿಳಿಸಬೇಕಿರಲಿಲ್ಲ. ಕೂರುವ ಜಾಗದಲ್ಲಿ ದೂಳು ಜಾಡಿಸಿ ಹಾಸಲು, ಮಾತಿನ ನಡುವೆ ವಾದಕ್ಕೆ ಬೀಸಲು ಜಾನುವಿನ ಹೆಗಲ ಮೇಲೆ ಹೊಸ ಹಳದಿ ಟರ್ಕಿ ಟವೆಲ್ ಯಾವೊತ್ತೂ ಇರುತ್ತದೆ; ಕಳೆದ ಸಲ ಗುತ್ತಿಗೆ ಕೆಲಸದಲ್ಲಿ ಆದ ಲಾಭದ ಲಾಂಛನವೆಂಬಂತೆ ಅವನ ಬೆರಳುಗಳಿಗೆ ಕೆಂಪು ಹರಳಿನ ಎರಡು ಬಂಗಾರದ ಉಂಗುರಗಳಿವೆ. ಸಮುದ್ರ ತೀರದ ಉಪ್ಪು ಗಾಳಿಯ ಯಾವುದೊ ಪುಟ್ಟ ಊರಿನ ಜಾನು ತಂಡ ಎಬ್ಬಿಸುವುದಕ್ಕೂ ಮುಂಚೆಯೇ ಕಾಲಾಂತರದಿಂದ ಕೆಲಸ ಮಾಡಿಕೊಂಡಿರುವ ಊರನ್ನು ಸುತ್ತಾಡಿ ಗುತ್ತಿಗೆ ಹೊಂದಿಸಿಕೊಂಡು ಹೋಗುವುದು ಹಳೆಯ ರೂಢಿ. ಅವನ ಬರುವಿಕೆಯನ್ನು ಕಾಯುವುದು ತಟಗಾರಿನ ನಮಗೆಲ್ಲ ಅಭ್ಯಾಸವಾಗಿ ಹೋಗಿದೆ. ತೇರಿನಂಥ ಎತ್ತರದ ದನಿಯ, ವಿಸ್ತಾರದಲೆಯ ನಗುವಿನ ಅವನಿಂದ ಮನೆಯ ಜಗಲಿಗೆ ಶೋಭೆ. ಬಂದವನೆ ಉರಿ ಬಿಸಿಲ ಲೆಕ್ಕಿಸದೆ ನನ್ನ ಜೊತೆಗೂಡಿ ಗದ್ದೆಯ ಸನಿಹದ ಬಿಡಾರವನ್ನು ಪರಿಶೀಲಿಸಿದ. “ನಮ್ಮ ಕಡೆ ಹುಡುಗ್ರು, ಹುಡ್ಗೀರು ಈ ವರ್ಷ ಮಳೆ ಇಲ್ಲ ಅದಕ್ಕೆ ಮದುವೆ ಆಗೋದಿಲ್ಲ ಎಂದು ಮುಹೂರ್ತ ಮುಂದಾಕಿದಾರೆ. ಹಾಗಾಗಿ ಈ ಸಲ ತಂಡದಲ್ಲಿ ಬಿಸಿ ರಕ್ತದವರೇ ಹೆಚ್ಚು ಇರ್ತಾರೆ. ಬಿಡಾರ ಮೂರು ಭಾಗ ಮಾಡ್ಬೇಕು” ಎಂದೇನೊ ಯೋಜನೆಯನ್ನು ಕಲ್ಪಿಸಿಕೊಂಡ. “ಕೆಲ್ಸ ಗುತ್ತಿಗೆ ಆಯ್ತೇನೊ” ನನ್ನ ವಿಚಾರಣೆಗೆ ಉತ್ತರಿಸುತ್ತ ಅವನು, “ಸ್ವಲ್ಪ ಹೆಚ್ಚಿಗೇನೇ ಆಯ್ತೆಂದು ಕಾಣ್ತದೆ; ನಾನು ಮೊದ್ಲೇ ಹೇಳ್ತೇನೆ ಹತ್ಯಾರ ಸರೀ ಇಟ್ಟಿರ ಬೇಕು; ಇಲ್ಲಾ ಅಂದ್ರೆ ಕೆಲ್ಸ ಸಾಗೋದಿಲ್ಲ. ಪಗಾರ ನನ್ನ ಮೈ ಮೇಲೆಯೇ. ಈ ಮಾತು ಎಲ್ಲ ಒಡೆದೀರಿಗೆ ಹೇಳಿದ್ದೇನೆ. ಪ್ರಾಯದ ಮಕ್ಕಳಿಗೆ ಅಷ್ಟೇ ನೆಪ ಸಾಕು ಕಿಸಿ ಕಿಸಿ ನಗ್ತಾ ಕಾಲ ಹರಣ ಮಾಡಿ ಬಿಡ್ತಾರೆ. ಕಡೆಗೆ ಈ ಜಾನು ಕೈಲಿ ಗರಟೆ ಬರೋದೆ” ಎಂದು ಏರು ದನಿಯಲ್ಲಿ ತನಗೊದಗಬಹುದಾದ ಕಷ್ಟ ಹೇಳಿಕೊಂಡು ಎಚ್ಚರಿಸಿದ. ಮಣ್ಣು ಮತ್ತು ಮರದ ಕೆಲಸಗಳಿಗೆ ಕಸಬುದಾರರು ಕೇಳುವುದು ಹರಿತವಾದ ಹತ್ಯಾರಗಳನ್ನೇ. ಅವರ ದುಡಿತಾಯಕ್ಕೆ ಕೇವಲ ಕತ್ತಿ, ಕೊಡಲಿ, ಕುಟಾರೆಗಳನ್ನು ಕೊಟ್ಟರೆ ಮುಗಿಯುತ್ತಿರಲಿಲ್ಲ; ಅವುಗಳ ಮರದ ಹಿಡಿಕೆ, ಕಾವು ಪ್ರಮಾಣಬದ್ಧವಾಗಿರಬೇಕು; ಎಲ್ಲಕ್ಕಿಂತ ಮುಖ್ಯವಾಗಿ ಅಲಗು ಮೊಂಡಾಗದಂತೆ, ನಪ್ಪದಂತೆ, ಚಕಣ ಹಾರದಂತೆ ಕಲ್ಲಿಗೆ ತಿಕ್ಕಿದಷ್ಟೂ ಮಿಂಚುವ, ಕಡಿದಷ್ಟೂ ಹರಿತಗೊಳ್ಳುವ ತೀಕ್ಷ್ಣತೆಯನ್ನು ಕಾಯ್ದುಕೊಂಡಿರಬೇಕು. ಹತ್ಯಾರಗಳಿಗೆ ಅಂಥ ಕಠೋರ ಗುಣ ಪ್ರಾಪ್ತವಾಗಬೇಕಾದರೆ ಅವುಗಳಿಗೆ ‘ಹದ’ ಹಾಕುವ ನಿಷ್ಣಾತರು ಬೇಕು. ಹಾಗೆ ‘ಹದ’ ಹಾಕಲು ಎಲ್ಲ ಆಚಾರಿಗಳಿಂದ ಸಾಧ್ಯವಿರಲಿಲ್ಲ. ಆದ್ದರಿಂದಲೇ ಪ್ರತಿಸಲ ಜಾನು, “ಹತ್ಯಾರ ಲೋಕಲ್ ಆಚಾರಿಗಳಿಗೆ ಕೊಡೋದು ಬ್ಯಾಡ, ತಡ ಆದ್ರೂ ಚಿಂತೆ